(ಇಂದು ದಿನಾಂಕ 24-02-2020 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲು - ಪ್ರತಿವಾದಿಯರ ಪರ ಶ್ರೀ ಎನ್.ಕೆ.ಎಸ್. ವಕೀಲರಿಂದ-**

**11.** ಸ.ನಂ. 638 ಅ/2 ಅ ಇದರಲ್ಲಿ 0-1-8 ಕ್ಷೇತ್ರವನ್ನು 1 ನೇ ಪ್ರತಿವಾದಿಯವರು ನನ್ನ ಚಿಕ್ಕಪ್ಪ ಗಜಾನನ ಶೇಟ್ ಇವರಿಂದ ಖರೀದಿ ಮಾಡಿರುತ್ತಾರೆ ಎಂದರೆ ಇರಬಹುದು . ಸದ್ರಿ ಆಸ್ತಿಯ ಪಶ್ಚಿಮ ದಿಕ್ಕಿನಲ್ಲಿ ಅರುಣ ಗೋವಿಂದ ಮೇಸ್ತ ಇವರು ಖರೀದಿ ಮಾಡಿದ ಸ್ಥಳ ಇದೆ ಎಂದರೆ ಇರಬಹುದು . ಸದ್ರಿ ಅರುಣ ಮೇಸ್ತ ಮತ್ತು 1 ನೇ ಪ್ರತಿವಾದಿಯ ಆಸ್ತಿಯ ನಡುವೆ ಅರುಣ

ಮೇಸ್ತ್ರಾರವರು ನಿರ್ಮಿಸಿದ ಪಾಗಾರ ಇದೆ ಎಂದರೆ ಸಾಕ್ಷಿ , ಸದ್ರಿ ಪಾಗಾರವನ್ನು ನಾವು ಕೂಡಿಕೊಂಡುನಿರ್ಮಿಸಿದ್ದೇವೆ ಮತ್ತು ಸದ್ರಿ ಪಾಗಾರದ ನಂತರ ಅರುಣ ಮೇಸ್ತಾ ಹಾಗೂ 1 ನೇ ಪ್ರತಿವಾದಿಯ ಆಸ್ತಿ ಇದೆ ಎನ್ನುತ್ತಾರೆ. ಸದ್ರಿ ಪಾಗಾರವನ್ನು ಸುಮಾರು 11 -12 ವರ್ಷಗಳ ಹಿಂದೆ ನಿರ್ಮಿಸಿರುತ್ತೇವೆ. ಸದ್ರಿ ಪಾಗಾರ ಕೆಂಪುಗಲ್ಲಿನ ಪಾಗಾರ ಎಂದರೆ ಸರಿ. ಸದ್ರಿ ಪಾಗಾರ ಅಂದಾಜು 14 ಮೀಟರ ಉದ್ದ ಹಾಗೂ 5 ಅಡಿ ಎತ್ತರ ಇರಬಹುದು. ಆಗ ನಮಗೆ ಅಂದಾಜು ರೂ. 30,000-00 ಖರ್ಚು ತಗಲಿರುತ್ತದೆ. ಸದ್ರಿ ಪಾಗಾರವನ್ನು ಗುತ್ತಿಗೆದಾರರಾದ ಕಡೆಕೋಡಿಯ ಪಿ.ಎಲ್.ಪ್ರಭು ಇವರ ಮುಖಾಂತರ ನಿರ್ಮಿಸಿರುತ್ತೇವೆ. ಸದ್ರಿಯವರು ಜೀವಂತ ಇದ್ದಾರೆ. ಅರುಣ ಮೇಸ್ತಾ ಯಾವಾಗ ತನ್ನ ಆಸ್ತಿಯನ್ನು ಖರೀದಿಸಿರುತ್ತಾನೆ ಎಂದು ನನಗೆ ಹೇಳಲು ಬರುವುದಿಲ್ಲ.

**12.** ನಿ.ಪಿ. 14 ರಲ್ಲಿ ಪೋಟೊ ಕ್ರಮ ಸಂಖ್ಯೆ 2 ಮತ್ತು 3 ರಲ್ಲಿ ಕಾಣಿಸುವ ಕೆಂಪುಕಲ್ಲುಗಳನ್ನು 1 ನೇ ಪ್ರತಿವಾದಿ ಸಂಗ್ರಹಿಸಿರುತ್ತಾರೆ ಎಂದರೆ ಇರಬಹುದು . ಸಾಕ್ಷಿ ಮುಂದುವರೆದು ಅದನ್ನು ನಾವೇ ತಂದಿದ್ದೆವು ಎನ್ನುತ್ತಾರೆ. ಸದ್ರಿ ಕ್ರಮ ಸಂಖ್ಯೆ 2 ಪೋಟೊದ ಎಡಗಡೆ ರಸ್ತೆ ಕಾಣಿಸುತ್ತದೆ ಎಂದರೆ ಸರಿಯಲ್ಲ. ಸದ್ರಿ ರಸ್ತೆಯನ್ನು 1 ನೇ ಪ್ರತಿವಾದಿ ಮಣ್ಣು ಭರಾವು ಮಾಡಿ ನಿರ್ಮಿಸಿರುತ್ತಾನೆ ಎಂದರೆ ಸರಿಯಲ್ಲ. ಕ್ರಮ ಸಂಖ್ಯೆ 3 ಪೋಟೊದಲ್ಲಿ ಎಡಗಡೆ ಕೆಂಪುಕಲ್ಲಿನ ಪಾಗಾರ ಕಾಣಿಸುತ್ತದೆ. ಸದ್ರಿ ಪಾಗಾರ ಅರುಣ ಮೇಸ್ತಾ ಮತ್ತು 1 ನೇ ಪ್ರತಿವಾದಿಯ ಆಸ್ತಿ ನಡುವೆ ಇರುವ ಗಡಿ ಪಾಗಾರ ಎಂದರೆ ಸಾಕ್ಷಿ ಅದು ನಾವು ನಿರ್ಮಿಸಿದ ನಮ್ಮ ಗಡಿ ಪಾಗಾರ ಎನ್ನುತ್ತಾರೆ. ನಿ.ಪಿ. 14 ಕ್ರಮಸಂಖ್ಯೆ 4 ರಲ್ಲಿ ಇರುವ ಪೋಟೊದಲ್ಲಿನ ರಸ್ತೆ ನನ್ನ ಪ್ರಕಾರ ಪ್ರತಿವಾದಿಯರ ಹಕ್ಕಿನ ರಸ್ತೆ ಇರುತ್ತದೆ. ಸದ್ರಿ ರಸ್ತೆಯನ್ನು ಯಾವತ್ತೂ ಪ್ರತಿವಾದಿಯರು ಬಳಸಿರುವುದಿಲ್ಲ ಎಂದರೆ ಸರಿಯಲ್ಲ.

**13.** ಸಾಕ್ಷಿಗೆ ಈಗ 2 ಪೋಟೊಗಳನ್ನು ತೋರಿಸಲಾಗಿ ಸಾಕ್ಷಿ ಸದ್ರಿ ರಸ್ತೆ ನಮ್ಮ ಆಸ್ತಿಗಳಿಗೆ ಹೋಗಲು ಇರುವ ರಸ್ತೆ ಎಂದು ಹೇಳಿರುವ ಕಾರಣ ಅವುಗಳನ್ನು ಈಗ ನಿ .ಡಿ. 2 ಮತ್ತು 3 ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಇನ್ನೊಂದು ಪೋಟೊವನ್ನು ತೋರಿಸಿ ಅದರಲ್ಲಿ ಕಾಣಿಸುವ ಗೇಟ 1 ನೇ ಪ್ರತಿವಾದಿಯ ಮನೆಗೆ ಹೋಗಲು ಇರುವ ದಾರಿಯ ಪ್ರವೇಶ ದ್ವಾರ ಎಂದರೆ ಸಾಕ್ಷಿ ನಾನು 2017 ರಲ್ಲಿ ಮಣ್ಣು ಭರಾವು ಮಾಡಿದ ಸಮಯ 1 ನೇ ಪ್ರತಿವಾದಿ ಜಬರದಸ್ತಿಯಿಂದ ನಿರ್ಮಿಸಿರುತ್ತಾನೆ ಎಂದು ಹೇಳುತ್ತಾರೆ. ಹಾಗಾಗಿ ಸದ್ರಿ ಪೋಟೊವನ್ನು ಈಗ ನಿ.ಡಿ. 4 ಎಂದು ಗುರುತಿಸಲಾಯಿತು. ಸದ್ರಿ ನಿ.ಡಿ. 4 ರಲ್ಲಿ ಕಾಣಿಸುವ ಗೇಟ ಇನ್ನೂ ಕೂಡ ಅಸ್ತಿತ್ವದಲ್ಲಿ ಇದೆ ಎಂದರೆ ಸರಿ. ಸದ್ರಿ ಗೇಟನ್ನು 2017 ರಲ್ಲಿ ನಿರ್ಮಿಸಲಾಗಿದೆ. ದಿನಾಂಕ ,ತಿಂಗಳು ನೆನಪಿಲ್ಲ. ಸದ್ರಿ ಸಮಯ ನಾನು ನನ್ನ ಅಳ್ವೆಕೋಡಿ ಮನೆಯಲ್ಲಿ ಇದ್ದೆನು . ಈ ಬಗ್ಗೆ ನೀವು ಪೊಲೀಸರಿಗೆ ದೂರು ನೀಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ಸಿವಿಲ್ ಸ್ವರೂಪದ ಕೇಸಾದ ಕಾರಣ ಪೊಲೀಸರು ದೂರು ಸ್ವೀಕರಿಸಿಲ್ಲ ಎನ್ನುತ್ತಾರೆ. ನಾನು ಪೊಲೀಸರಿಗೆ ದೂರು ನೀಡಲು ಹೋಗಿಲ್ಲ ಎಂದರೆ ಸರಿಯಲ್ಲ. ಜಬರದಸ್ತಿಯಿಂದ ಗೇಟ ನಿರ್ಮಿಸಿದ ಬಗ್ಗೆ ವಾದಪತ್ರದಲ್ಲಿ ಬರೆಸಿದ್ದೀರಾ ಎಂದರೆ ನನಗೆ ನೆನಪಿಲ್ಲ. ಆದರೆ ವಕೀಲರಿಗೆ ಮಾಹಿತಿ ನೀಡಿರುತ್ತೇನೆ. ನಿ.ಡಿ. 4 ರಲ್ಲಿ ಕಾಣಿಸುವ ದಾರಿ ಮರುಮಾಗಣಿಯಲ್ಲಿ ಕಾಣಿಸಿದ ಪ್ರತಿವಾದಿಯರು ಅನುಭವಿಸಿಕೊಂಡು ಬಂದಿರುವ ದಾರಿ ಎಂದರೆ ನಾನು ಒಪ್ಪುವುದಿಲ್ಲ. ಸದ್ರಿ ದಾರಿ 1 ನೇ ಪ್ರತಿವಾದಿ ಕ್ರಯಕ್ಕೆ ಪಡೆದ ಆಸ್ತಿಯಲ್ಲಿ ಬರುತ್ತದೆ ಎಂದರೆ ಸರಿಯಲ್ಲ.

**14.** ಸಾಕ್ಷಿಗೆ ಈಗ ಇನ್ನೊಂದು ಪೋಟೊವನ್ನು ತೋರಿಸಿ ಅದರಲ್ಲಿ ಕಾಣಿಸುವ ಕೆಂಪು ಕಲ್ಲು ಇರುವ ಸ್ಥಳದ ಬಲಗಡೆಯ ಆಸ್ತಿ ನಿಮಗೆ ಸೇರಿದ್ದು ಎಂದರೆ ಸಾಕ್ಷಿ , ಸದ್ರಿ ಕೆಂಪು ಕಲ್ಲು ಇರುವ

ಬಲಗಡೆಗೆ ಇರುವ ಗಟ್ಟಿ ಕೆಂಪು ಕಲ್ಲಿನ ಪಾಗಾರ ಸಮೇತವಾಗಿ ಸದ್ರಿ ಸ್ಥಳ ನಮಗೆ ಸೇರಿದ್ದು ಎನ್ನುತ್ತಾರೆ. ಹಾಗಾಗಿ ಸದ್ರಿ ಪೋಟೋವನ್ನು ಈಗ ನಿ.ಡಿ. 5 ಎಂದು ಗುರುತಿಸಲಾಯಿತು. ನಿ.ಡಿ. 4 ರಲ್ಲಿ ಎಡಗಡೆ ಕಾಣಿಸುವ ಗಟ್ಟಿ ಕೆಂಪು ಕಲ್ಲಿನ ಪಾಗಾರ ಹಳೆಯ ಪಾಗಾರ ಎಂದರೆ ಸರಿ . ಸದ್ರಿ ಪಾಗಾರ 1 ನೇ ಪ್ರತಿವಾದಿ ಮತ್ತು ಅರುಣ ಮೇಸ್ತಾ ಇವರ ಗಡಿ ಪಾಗಾರ ಎಂದರೆ ಸರಿಯಲ್ಲ.

**15.** ಸಾಕ್ಷಿಗೆ ಈಗ ಸದ್ರಿಯವರಿಗೆ ಸೇರಿದ ಆಸ್ತಿಯ ಪೋಟೋವನ್ನು ತೋರಿಸಲಾಗಿ ಅವರು ಅದು ತಮ್ಮ ಹಕ್ಕಿನ ಸ್ಥಳ ಸ.ನಂ. 436 ಎಂದು ಒಪ್ಪಿದ ಕಾರಣ ಗುರುತಿಸಿದ ಕಾರಣ ಅದನ್ನು ನಿ.ಡಿ. 6 ಎಂದು ಗುರುತಿಸಲಾಯಿತು. ನಿ.ಡಿ. 6 ರಲ್ಲಿ ಕಾಣಿಸುವ ಆಸ್ತಿ ಸ.ನಂ. 638 ಅ/2 ಬ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಗೆ ಇನ್ನೊಂದು ಪೋಟೋವನ್ನು ತೋ ರಿಸಲಾಗಿ ಅದರಲ್ಲಿ ಕಾಣಿಸುವ ದಾರಿ ಮುಂದುವರೆದು 1 ನೇ ಪ್ರತಿವಾದಿಯ ಮನೆಗೆ ಸೇರುತ್ತದೆ ಎಂದರೆ ಸಾಕ್ಷಿ ಇರಬಹುದು . ಸದ್ರಿ ಜಾಗವನ್ನು ಅತಿಕ್ರಮಿಸಿರುತ್ತಾರೆ ಎನ್ನುತ್ತಾರೆ. ಹಾಗಾಗಿ ಸದ್ರಿ ಪೋಟೋವನ್ನು ಈಗ ನಿ.ಡಿ. 7 ಎಂದು ಗುರುತಿಸಲಾಯಿತು. ನಿ.ಡಿ. 4 ಮತ್ತು 7 ರಲ್ಲಿ ಕಾಣಿಸುವ ದಾರಿಯನ್ನು 1 ನೇ ಪ್ರತಿವಾದಿ ಅನಾದಿ ಕಾಲದಿಂದಲೂ ಅನುಭವಿಸಿಕೊಂಡು ಬಂದಿರುತ್ತಾನೆ ಎಂದರೆ ಸರಿಯಲ್ಲ. ಸದ್ರಿ ದಾರಿಯ ಹಕ್ಕನ್ನು ಮೊಟಕುಗೊಳಿಸಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ.

**16.** ದಾವಾ ಪೂರ್ವ ಭೂಮಾಪನ ಇಲಾಖೆಗೆ ನಾವು ಅರ್ಜಿ ಸಲ್ಲಿಸಿದ್ದೇವೆ . ದಿನಾಂಕ 20-06-2017 ರಂದು ಮೋಜಣಿಗೆ ಬರುವುದಾಗಿ ನೋಟಿಸು ನೀಡಿದ್ದರು ಎಂದರೆ ನನಗೆ ನೆನಪಿಲ್ಲ, ಸಾಕ್ಷಿ 30-06-2017 ರಂದು ಬರುವುದಾಗಿ ನೋಟಿಸ ನೀಡಿದ್ದರು ಎನ್ನುತ್ತಾರೆ . ಸಾಕ್ಷಿಗೆ ಈಗ ವಾದಿಯರ ಪರ ಹಾಜರುಪಡಿಸಿದ್ದ ದಿನಾಂಕ 20-06-2017 ರ ನೋಟಿಸಿನ ಬೆರಳಚ್ಚು ಪ್ರತಿಯನ್ನು ತೋರಿಸಲಾಗಿ ಸಾಕ್ಷಿದಾರರು ಆ ರೀತಿ ನೋಟಿಸು ಬಂದದ್ದನ್ನು ಒಪ್ಪಿಕೊಂಡ ಕಾರಣ ಅದನ್ನು ಈಗ ಪ್ರತಿವಾದಿಯರ ಪರ ನಿ.ಡಿ. 8 ಎಂದು ಗುರುತಿಸಲಾಯಿತು. ನಿ.ಡಿ. 8 ನೋಟಿಸಿಗೆ 1 ನೇ ಪ್ರತಿವಾದಿ ತಕರಾರು ಸಲ್ಲಿಸಿದ್ದನು ಎಂದರೆ ಸರಿಯಲ್ಲ. ದಿನಾಂಕ

20-06-2017 ರಂದು ಭೂಮಾಪಕರು ದಾವಾ ಆಸ್ತಿಗೆ ಭೇಟಿ ನೀಡಿದ ಬಗ್ಗೆ ನನಗೆ ನೆನಪಿಲ್ಲ. ನಿ.ಡಿ. 8 ನೋಟಿಸಿನ ಪ್ರಕಾರ ದಿನಾಂಕ 20-06-2017 ರಂದು ಯಾಕೆ ಭೂಮಾಪಕರು ಬಂದಿಲ್ಲ ಎಂದು ನಾನು ವಿಚಾರಣೆ ಮಾಡಿರುತ್ತೇನೆ. ಅದಕ್ಕೆ ಅವರು ದಿನಾಂಕ 30-06-2017 ರಂದು ಬರುವುದಾಗಿ ತಿಳಿಸಿದ್ದರು . ಯಾಕೆ 20-06-2017 ರಂದು ಬಂದಿಲ್ಲ ಎಂದು ಭೂಮಾಪಕರು ಲೇಖಿ ಬರೆದುಕೊಟ್ಟ ಬಗ್ಗೆ ನನಗೆ ನೆನಪಿಲ್ಲ. ದಿನಾಂಕ 30-06-2017 ರಂದು ಬರುವುದಾಗಿ ನಿ.ಪಿ. 9 ರಂತೆ ನೋಟಿಸು ಯಾವಾಗ ನನಗೆ ಬಂದಿರುತ್ತದೆ ಎಂದು ನೆನಪಿಲ್ಲ. ಸದ್ರಿ ನಿ.ಪಿ. 9 ನೋಟಿಸ್ ಅಂಚೆ ಮೂಲಕ ಬಂದಿರಬಹುದು. ಯಾವ ರೀತಿಯ ಅಂಚೆ ಎಂದು ನೆನಪಿಲ್ಲ.

**17.** ಭೂಮಾಪಕರು ದಿನಾಂಕ 30-06-2017 ರಂದು ವಾದಿಯರ ಆಸ್ತಿಯನ್ನು ಮಾತ್ರ ಅಳತೆ ಮಾಡುವುದಾಗಿ 1 ನೇ ಪ್ರತಿವಾದಿಗೆ ತಿಳಿಸಿದ್ದರು ಎಂದರೆ ನನಗೆ ಗೊತ್ತಿಲ್ಲ . ಸಾಕ್ಷಿಗೆ ಈಗ ಭೂಮಾಪಕರು ತಯಾರಿಸಿದ ಹೇಳಿಕೆಯ ದೃಢೀಕೃತ ನಕಲನ್ನು ತೋರಿಸಲಾಗಿ ಅದರಲ್ಲಿ ಸಾಕ್ಷಿದಾರರು ತಮ್ಮ ಸಹಿಯನ್ನು ಗುರುತಿಸಿದ ಕಾರಣ ಸದ್ರಿ ದಾಖಲಾತಿಯನ್ನು ನಿ.ಡಿ. 9 ಎಂದು ಗುರುತಿಸಲಾಯಿತು. ನಿ.ಡಿ. 9 ದಾಖಲೆಯನ್ನು ಓದಿ ನೋಡಿ ಸಹಿ ಮಾಡಿದ್ದೀರಾ ಎಂದರೆ ಸಾಕ್ಷಿ ಸದ್ರಿ ದಾಖಲಾತಿಯನ್ನು ನ್ಯಾಯಾಲಯದ ಸಮಕ್ಷಮ ಓದಿ ನೋಡಿ ನಂತರ ನಿ.ಡಿ. 9 ನ್ನು ನಾನು ಓದದೇ ಸಹಿ ಮಾಡಿದ್ದೇನೆ ಎನ್ನುತ್ತಾರೆ. ಸರಕಾರಿ ಅಧಿಕಾರಿಗಳು ತಯಾರಿಸಿದ ದಾಖಲೆಯನ್ನು ನಾನು ಓದಿ ನೋಡಿ ಸಹಿ ಮಾಡುತ್ತೇನೆ ಎಂದರೆ ಸರಿ . ನಿ.ಡಿ. 9 ಕ್ಕೆ ನಾನು ಓದಿ ನೋಡಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ . ಸಾಕ್ಷಿ ಸದ್ರಿ ಸಮಯ ನಾನು ಗಡಿಬಿಡಿಯಲ್ಲಿ ಇದ್ದೆನು ಎನ್ನುತ್ತಾರೆ. ನಿ.ಡಿ. 9 ಮೋಜಣಿಗೆ ನನ್ನ ದೊಡ್ಡಪ್ಪನ ಮಗ ಜೀತನ್ ಶೇಟ್ ಅರ್ಜಿ ಸಲ್ಲಿಸಿದ್ದನು.

ಸದ್ರಿ ಮೋಜಣಿಗೆ ಯಾರು ತಕರಾರು ಸಲ್ಲಿಸಿದ್ದರು ಎಂದು ನನಗೆ ಗೊತ್ತಿಲ್ಲ. ಸ.ನಂ. 636/4 ರಲ್ಲಿ ನಮಗೆ ಪಾಲು ಇದೆ. ಸದ್ರಿ ಪಾಲು ಕೂಡ ನಿ.ಡಿ. 1 ದಸ್ತಾವೇಜಿನ ಪ್ರಕಾರ ನಮಗೆ ಲಭಿಸಿರುತ್ತದೆ. ಮೂಲ ಹಿಸ್ಸಾದಲ್ಲಿ ತೊಂದರೆ ಇರುವ ಕಾರಣ ನಿ.ಡಿ.9 ರಂತೆ ಮೋಜಣಿ ಕ್ರಮವನ್ನು ಕೈಗೊಂಡಿಲ್ಲ ಎಂದರೆ ಸರಿಯಲ್ಲ.

**18.** ನನ್ನ ಬಳಿ ಸ .ನಂ. 638/2 ಇದರ ಮೂಲ ನಕಾಶೆ ಇದೆ. ಸದ್ರಿ ನಕಾಶೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ . ಸದ್ರಿ ಮೂಲ ನಕಾಶೆಯನ್ನು ನ್ಯಾಯಾಲಯಕ್ಕೆ ಹಾಜರಪಡಿಸಬಹುದು.

**(ಈ ಹಂತದಲ್ಲಿ ಪ್ರತಿವಾದಿಯರ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಅಂತಿಮ ಅವಕಾಶವಾಗಿ ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ, ಕುಮಟಾ